# ಸಂತ ಜೋನರ ಪ್ರೌಢಶಾಲೆ.

ಸ್ಯೆಂಟ್ ಜೋನ್ಸ್ ಪ್ರೌಢ ಶಾಲೆಯು ದಿ। ವಂ। ಫಾ। ಜಿ. ಬಿ. ಡಿಸೋಜರವರ ದೂರದೃಷ್ಟಿಯ ಫಲವಾಗಿ, 1981 ರಲ್ಲಿ 85 ವಿದ್ಯಾರ್ಥಿಗಳಿಂದ, ಆರಂಭಗೊಂಡು ಕಳೆದ 43 ವರ್ಷಗಳಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಅಗತ್ಯದ ಪ್ರೌಢ ಶಿಕ್ಷಣವನ್ನು ನೀಡಿ, ಉತ್ತಮ ಭವಿಷ್ಯವನ್ನು ರೂಪಿಸುವ ಮೂಲಕ ಸಮಾಜಕ್ಕೆ ಮಹತ್ತರ ಕೊಡುಗೆ ನೀಡಿದೆ.

ಈ ಸಂಸ್ಥೆಯ ಸ್ಥಾಪನೆಯಲ್ಲಿ ಶ್ರಮಪಟ್ಟವರು ಶ್ರೀ ಬೆನೆಡಿಕ್ಟ್ ಮಾರ್ಟಿಸ್, ಶ್ರೀ ಜೋನ್ ಲೋಬೋ, ಶ್ರೀ ಆ್ಯಂಟನಿ ಡೇಸಾ, ಶ್ರೀ ಎಚ್. ಆರ್. ಆಳ್ವರವರು. ಈ ಶಾಲೆಯ ಅನುಮತಿಗಾಗಿ ಪ್ರಯತ್ನಿಸಿದ್ದು ಅಂದಿನ ಶಾಸಕರಾಗಿದ್ದ ದಿ। ಭಾಸ್ಕರ ಶೆಟ್ಟಿ ಹಾಗೂ ಆಗಿನ ಜಂಟಿ ನಿರ್ದೇಶಕ ದಿ। ನಾರಾಯಣ ಭಟ್ ಕುರ್ಕಾಲುರವರು. ಹಾಗೂ ಕಛೇರಿಗಳಿಗೆ ಅಲೆದಾಡಿ ಅನುಮತಿಯನ್ನು ಪಡೆಯುವಲ್ಲಿ ಯಶಸ್ವಿಯಾದ ನಮ್ಮವರೇ ಆದ ದಿ। ಅಗಸ್ಟಿನ್ ಲೋಬೋರವರು.

ಈ ಸಂಸ್ಥೆಯು ಶಂಕರಪುರದ ವಿದ್ಯಾಭಿಮಾನಿಗಳ ಸಹಕಾರದೊಂದಿಗೆ ಸ್ಥಾಪಿಸಲ್ಪಟ್ಟು ಕೆಥೋಲಿಕ್ ಶಿಕ್ಷಣ ಮಂಡಳಿ ಮಂಗಳೂರು ಇದರ ಆಡಳಿತಕ್ಕೆ ಒಳಪಟ್ಟಿದೆ. ಮಂಗಳೂರು ಧರ್ಮಪ್ರಾಂತ್ಯದ ಧರ್ಮಾಧ್ಯಕ್ಷರಾದ ಪರಮಪೂಜ್ಯ ಡಾ. ಪೀಟರ್ ಪಾವ್ಲ್ ಡಿಸೋಜ ಇವರು ಅಧ್ಯಕ್ಷರಾಗಿದ್ದು ವಂದನೀಯ ಫಾ। ಆ್ಯಂಟನಿ ಶೇರಾರವರು ಕಾರ್ಯದರ್ಶಿಗಳಾಗಿರುವರು.

1981 ರಿಂದ 1988ರವರೆಗೆ ಸ್ಥಾಪಕ ಸಂಚಾಲಕರಾಗಿದ್ದ ಪೂಜ್ಯ ವಂ। ಫಾ। ಜಿ. ಬಿ. ಡಿಸೋಜರವರು ಪ್ರೌಢಶಾಲೆಗೆ ಬೇಕಾಗಿರುವ ಎಲ್ಲಾ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿದರು. ಶಾಲೆ ಬೆಳೆದಂತೆ ಶಾಲೆಗೆ ಬೇಕಾದಂತಹ ಸಮರ್ಪಕ ಶಿಕ್ಷಕ ಹಾಗೂ ಶಿಕ್ಷಕೇತರ ವೃಂದವನ್ನು ನೇಮಿಸಿದರು. ಅನುದಾನ ರಹಿತ ಆ 5 ವರ್ಷಗಳಲ್ಲಿ ಶಿಕ್ಷಕರಿಗೆ ವೇತನ ಹಾಗೂ ಶಾಲೆಗೆ ಒಂದು ಅಂತಃಸ್ತುವುಳ್ಳ ಕಟ್ಟಡವನ್ನು ನಿರ್ಮಿಸಿಕೊಟ್ಟರು. ಅವರು ಈ ಚರ್ಚಿನಿಂದ ನಿವೃತ್ತಿ ಹೊಂದುವ ಸಮಯದಲ್ಲಿ ಎರಡನೇ ಅಂತಸ್ತಿನಲ್ಲಿ ಶಾಲೆಗೆ ಸಭಾಭವನವನ್ನು ನಿರ್ಮಿಸಿ ಅದಕ್ಕೆ ತಗಲಿದ ರೂಪಾಯಿ 75,000/–ವನ್ನು ತಾವೇ ನೀಡಿದರು. ಅವರ ನಂತರ 1988ರಲ್ಲಿ ಸಂಚಾಲಕತ್ವವನ್ನು ರೆ. ಫಾ। ಜೆ.ಪಿ ತಾವ್ರೊರವರು ವಹಿಸಿಕೊಂಡರು. ಶಾಲೆಗೆ ಸುಸಜ್ಜಿತವಾದ ಪ್ರಯೋಗಾಲಯ, ವಿದ್ಯಾರ್ಥಿನಿಯರಿಗಾಗಿ 12 ಶೌಚಾಲಯಗಳು, ಸೈಕಲ್ ಸ್ಟ್ಯಾಂಡ್ ಹಾಗೂ ವಿದ್ಯಾರ್ಥಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದರು.

1995 ರಿಂದ 2002ರವರೆಗೆ ವಂ। ಫಾ। ವಿನ್ಸೆಂಟ್ ಮೊಂತೆರೋರವರು ಸಂಚಾಲಕರಾಗಿದ್ದರು. ಪ್ರೌಢಶಾಲೆಗೆ ಆಧುನಿಕ ಮಾದರಿಯ ವಾಚನಾಲಯವನ್ನು ನಿರ್ಮಿಸಿಕೊಟ್ಟರು. “FUN TIMES” ಎಂಬ ನೂತನ ಕಾರ್ಯಕ್ರಮ ದಿಂದ ವಿದ್ಯಾರ್ಥಿವೃಂದ, ಹೆತ್ತವರು ಹಾಗೂ ಆಸುಪಾಸಿನ ವಿದ್ಯಾಭಿಮಾನಿಗಳ ಸಹಕಾರದೊಂದಿಗೆ ಸುಮಾರು ಒಂದುವರೆ ಲಕ್ಷದಷ್ಟು ಧನಸಂಗ್ರಹ ಮಾಡಿ ವಿದ್ಯಾರ್ಥಿಗಳಿಗೆ ಹಾಗೂ ಇತರರಿಗೆ ಶಟ್ಲ್ ಹಾಗೂ ಟೇಬಲ್ ಟೆನ್ನಿಸ್ ಆಡಲು ಒಳಾಂಗಣ ಭವನವನ್ನು ನಿರ್ಮಿಸಿದರು. ಆಟದ ಬಯಲಿನ ವಿಸ್ತರಣೆ ಹಾಗೂ ಬಯಲಿನಲ್ಲಿ ಕುಳಿತುಕೊಳ್ಳಲು ಗ್ಯಾಲರಿಯನ್ನು ನಿರ್ಮಿಸಿದರು. 7 ವರ್ಷಗಳ ಕಾಲ ಶಾಲೆಯ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದರು.

2002ರಲ್ಲಿ ಅವರು ವರ್ಗಾವಣೆ ಆದಾಗ ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸೇವೆಗಾಗಿ ರಾಜ್ಯ ಪ್ರಶಸ್ತಿ ಪಡೆದ ವಂ। ಫಾ। ಅಲೆಕ್ಸಾಂಡರ್ ಲೋಬೋರವರು ಸಂಚಾಲಕರ ಸ್ಥಾನವನ್ನು ತುಂಬಿದರು. ಆರಂಭದಲ್ಲಿಯೇ ಸುಂದರವಾದ ಹೂ ದೋಟವನ್ನು ನಿರ್ಮಿಸಿ ಶಾಲೆಯ ಅಂದವನ್ನು ಹೆಚ್ಚಿಸಿದರು. 2006ರಲ್ಲಿ ವಂ। ಫಾ। ಅಲೆಕ್ಸಾಂಡರ್ ಲೋಬೋರವರ ಸಂಚಾಲಕತ್ವದಲ್ಲಿ ನಮ್ಮ ಈ ವಿದ್ಯಾಸಂಸ್ಥೆಯು ಬೆಳ್ಳಿ ಹಬ್ಬವನ್ನು ಆಚರಿಸಿತು. ಸುಮಾರು ಒಂದು ಲಕ್ಷ ರೂಪಾಯಿ ವೆಚ್ಚದ ಆಧುನಿಕ ವ್ಯವಸ್ಥೆ ಇರುವ ಶೌಚಾಲಯಗಳನ್ನು ಹುಡುಗರಿಗಾಗಿ ನಿರ್ಮಿಸಿಕೊಟ್ಟರು. ಸುಮಾರು ಒಂದು ಲಕ್ಷ

ರೂಪಾಯಿ ವೆಚ್ಚದಲ್ಲಿ ಹಳೆಯ ಶಾಲೆಯ ಮೈದಾನವನ್ನು ಸಮತಟ್ಟುಗೊಳಿಸಿದರು. ಶಾಲಾ ಎಸ್.ಎಸ್.ಎಲ್.ಸಿ. ಫಲಿತಾಂಶವನ್ನು ಅಭಿವೃದ್ಧಿ ಪಡಿಸಲು ನಿಧಾನ ಕಲಿಕೆಯ ವಿದ್ಯಾರ್ಥಿಗಳಿಗೆ ಶಾಲೆಯಲ್ಲಿಯೇ ನಿಲ್ಲುವ ಅವಕಾಶ ಮಾಡಿಕೊಟ್ಟು ಊಟೋಪಚಾರ ನೀಡಿ ಸ್ವತಃ ವೈಯಕ್ತಿಕವಾಗಿ ಶ್ರಮಿಸಿದ್ದಾರೆ. 2007ರಲ್ಲಿ ವಂ। ಫಾ। ಹೆರಾಲ್ಡ್ ಡಿಸೋಜರವರು ಶಾಲಾ ಸಂಚಾಲಕರಾಗಿ ಈ ಮೇಲಿನ ಎಲ್ಲಾ ಶೈಕ್ಷಣಿಕ ಸೌಲಭ್ಯಗಳಿಗೆ ಕುಂದುಕೊರತೆಯಾಗದಂತೆ ಎಚ್ಚರಿಕೆಯಿಂದ ಮುನ್ನಡೆಸಿ ಸಹಕರಿಸಿದರು.

2011ರಲ್ಲಿ ಕ್ರೀಯಾಶೀಲ ವ್ಯಕ್ತಿತ್ವದ, ವಂ। ಫಾ। ಡಾ. ಲೆಸ್ಲಿ ಡಿಸೋಜರವರು ಶಾಲಾ ಸಂಚಾಲಕರಾಗಿ 2017ರವರೆಗೆ ನಮ್ಮ ವಿದ್ಯಾಸಂಸ್ಥೆಯನ್ನು ಬೆಳೆಸಿದರು. ಅಕ್ಷರ ದಾಸೋಹ ಅಡುಗೆ ಕೋಣೆ, ಕುಡಿಯುವ ನೀರಿನ ಸೌಲಭ್ಯ, ಶಾಲೆಗೆ ಅಂದವಾದ ಸ್ವಾಗತ ಮಹಾದ್ವಾರ, ನೀರು ಇಂಗುವ ಗುಂಡಿ, ಶಿಕ್ಷಕರ ನೂತನ ಕೊಠಡಿ, ಗೌರವ ಶಿಕ್ಷಕರ ವೇತನ ನಿಧಿಗಾಗಿ ನಾಟಕ ಪ್ರದರ್ಶನ, ಸಿ.ಸಿ. ಕೆಮರಾ, ಕಂಪ್ಯೂಟರ್ ಕೋಣೆ ಇತ್ಯಾದಿಗಳನ್ನು ಒದಗಿಸಿದರು. ಜೊತೆಗೆ ವಿದ್ಯಾಸಂಸ್ಥೆಗಳಿಗೆ ಸ್ವಚ್ಛ ಪರಿಸರವನ್ನು ಕಲ್ಪಿಸಿದರು.

2017ರಲ್ಲಿ ಶಾಲಾ ಸಂಚಾಲಕರಾಗಿ ಸಾಮಾಜಿಕ ಚಿಂತಕರು, ಶಿಕ್ಷಣ ಸಂಸ್ಥೆಗಳಲ್ಲಿ ಆಡಳಿತ ಮತ್ತು ಬೋಧನಾ ಅನುಭವವನ್ನು ಹೊಂದಿದ ವಂ। ಫಾ। ಫರ್ಡಿನಾಂಡ್ ಗೊನ್ಸಾಲ್ವಿಸ್‌ರವರು ನೇತೃತ್ವವಹಿಸಿದರು. ವಿದ್ಯಾರ್ಥಿಗಳ ಮೇಲಿನ ಶೈಕ್ಷಣಿಕ ಕಾಳಜಿಯಿಂದ ಹಿರಿಯ ಶಿಕ್ಷಕರ ನಿವೃತ್ತಿಯಿಂದ ತೆರವಾದ ಶಿಕ್ಷಕ ಹುದ್ದೆಗಳಿಗೆ ನೇಮಕಾತಿ ಲಭ್ಯವಿಲ್ಲದಿದ್ದಾಗ ಪರಿಸರದಲ್ಲಿ ಮುಚ್ಚಲ್ಪಡುತ್ತಿದ್ದ ಶಾಲೆಗಳಿಂದ ಮೂವರು ಉತ್ತಮ ಶಿಕ್ಷಕರನ್ನು ವರ್ಗಾಯಿಸಿ ತರುವಲ್ಲಿ ಯಶಸ್ವಿಯಾದರು. 2021–22ನೇ ಸಾಲಿನಲ್ಲಿ ಶಾಲಾ ಸಂಚಾಲಕರ ಮುಂದಾಳತ್ವದಲ್ಲಿ ನಮ್ಮ ಶಾಲೆಯು ಮಾಣಿಕ್ಯೋತ್ಸವವನ್ನು ಆಚರಿಸಿತು. ಈ ಸಂದರ್ಭದಲ್ಲಿ 18 ಲಕ್ಷ ವೆಚ್ಚದ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಕೈಗೊಳ್ಳಲಾಗಿದೆ. 13 ಹೊಸ ಕಂಪ್ಯೂಟರ್‌ಗಳಿಂದ ಸಂಯೋಜಿಸಿದ ಕಂಪ್ಯೂಟರ್ ಕೊಠಡಿ, ಶಾಲಾ ಮೇಲ್ಛಾವಣಿಯ ದುರಸ್ಥಿ, ಶಾಲೆಗೆ ಸುಣ್ಣ–ಬಣ್ಣ, ಕ್ರೀಡಾ ಕೊಠಡಿಯ ನಿರ್ಮಾಣ, ಪ್ರೊಜೆಕ್ಟರ್, ಧ್ವನಿವರ್ಧಕ ವ್ಯವಸ್ಥೆಗಳನ್ನು ಶಾಲೆಗಾಗಿ ಮಾಡಿರುತ್ತಾರೆ. ಶಾಲಾ ಮಾನ್ಯತೆ ನವೀಕರಣ ಸಂದರ್ಭದಲ್ಲಿ ಮಕ್ಕಳ ಸುರಕ್ಷತೆಗಾಗಿ ಕಟ್ಟಡ ಅಗ್ನಿಸುರಕ್ಷಾ ಪರಿಕರಗಳನ್ನು ಶಾಲೆಗೆ ಅಳವಡಿಸಿದ್ದಾರೆ.

1981 ರಿಂದ 1987ರವರೆಗೆ ಈ ಶಾಲೆಯ ಪ್ರಾರಂಭದ ವರ್ಷಗಳಲ್ಲಿ ಭದ್ರ ಬುನಾದಿಯನ್ನು ಹಾಕಿದವರು ದಿ। ಪಿ. ವಿಠಲ್ ಶೆಣೈಯವರು ಇನ್ನಂಜೆ ಪ್ರೌಢ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ಅನುಭವವಿದ್ದ ಇವರು ನಮ್ಮ ಚರ್ಚಿನ ಹಿರಿಯರ ಕೋರಿಕೆಯ ಮೇರೆಗೆ ಈ ಸಂಸ್ಥೆಯ ಮೊದಲ ಮುಖ್ಯೋಪಾಧ್ಯಾಯರಾಗಿ ನೇಮಿಸಲ್ಪಟ್ಟರು ಅಧ್ಯಾಪಕರಿಗೆ ಹಿರಿಯರಾಗಿ, ಶಾಲೆಯ ಸರ್ವತೋಮುಖ ಬೆಳವಣಿಗೆಗೆ 6 ವರ್ಷಗಳ ಕಾಲ ಸತತವಾಗಿ ಶ್ರಮಿಸಿದ್ದಾರೆ.

1987ರಲ್ಲಿ ಈ ಶಾಲೆಯು ಸರಕಾರದ ಖಾಯಂ ಅನುದಾನಕ್ಕೆ ಒಳಪಟ್ಟ ಬಳಿಕ ಪೂರ್ಣಪ್ರಮಾಣದಲ್ಲಿ ಶಾಲೆಯನ್ನು ಮುನ್ನಡೆಸಲು, ಇನ್ನಂಜೆ ಪ್ರೌಢಶಾಲೆಯಲ್ಲಿ ವಿಜ್ಞಾನ ಸಹ ಶಿಕ್ಷಕರಾಗಿದ್ದ ಶ್ರೀ ಜೋನ್ ಲೋಬೋರವರು ಶಾಲೆಯ ಮುಖ್ಯೋಪಾಧ್ಯಾಯರಾಗಿ ನೇಮಕಗೊಂಡರು. ನಮ್ಮ ಶಾಲಾ ಸ್ಥಾಪನೆಯ ಕಾರಣಕರ್ತರಲ್ಲಿ ಓರ್ವರಾಗಿದ್ದ ಅವರು ತಮ್ಮ ಸೇವೆಯ ಮೊದಲ 5 ವರ್ಷಗಳಲ್ಲಿ ಎಲ್ಲಾ ಸೌಕರ್ಯಗಳನ್ನು ಒದಗಿಸಲು ತುಂಬಾ ಶ್ರಮಿಸಬೇಕಾಯಿತು. 18 ವರ್ಷ ಸೇವೆ ಸಲ್ಲಿಸಿ 2005ರ ಫೆಬ್ರವರಿಯಲ್ಲಿ ನಿವೃತ್ತರಾದ ಬಳಿಕ 2006ರಲ್ಲಿ ಶಾಲೆಯ ಬೆಳ್ಳಿಹಬ್ಬದ ಕಾರ್ಯಕಾರಿ ಸಮಿತಿಯ ಸಂಚಾಲಕರಾಗಿ ಸೇವೆ ಸಲ್ಲಿಸಿದರು. ನಿವೃತ್ತಿ ಬಳಿಕವೂ ಶಾಲೆಯ ಅಭಿವೃದ್ಧಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

2005 ರಲ್ಲಿ ಸ್ಯೆಂಟ್ ಜೋನ್ಸ್ ಪ್ರೌಢ ಶಾಲೆಯ ಪ್ರಪ್ರಥಮ ಶಿಕ್ಷಕಿ ಶ್ರೀಮತಿ ಕ್ಲಾರಾ ಡಬ್ಲ್ಯೂ ಮೆಂಡೋನ್ಸಾರವರು ಮುಖ್ಯೋಪಾಧ್ಯಾಯನಿಯಾದರು. 2007 ರಲ್ಲಿ ಇವರ ಮುತುವರ್ಜಿಯಲ್ಲಿ ಶಾಲಾ ರಜತ

ಮಹೋತ್ಸವವು ವರ್ಷ ಪೂರ್ತಿ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ನಡೆಯಿತು. ಸರಕಾರದ ಯೋಜನೆಗಳಾದ ಅಕ್ಷರ ದಾಸೋಹ, ಕ್ಷೀರಭಾಗ್ಯ ಕಾರ್ಯಕ್ರಮಗಳನ್ನು ಆರಂಭಿಕ ಹಂತದಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸಿದರು. ಶಾಲಾ ಫಲಿತಾಂಶವನ್ನು ಹೆಚ್ಚಿಸಲು ಶ್ರಮಪಟ್ಟರು. ಪ್ರತಿವರ್ಷ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಮುಂಜಾನೆ 7.30 ರಿಂದ, ರಾತ್ರಿ 9 ರವರೆಗೆ ತರಗತಿಗಳನ್ನು ಆಯೋಜಿಸಿದರು. ಶಿಕ್ಷಕರ ನೇಮಕಾತಿ ಪ್ರಕ್ರಿಯೆಯನ್ನು ನಡೆಸಿಕೊಟ್ಟರು. ಹೆಚ್ಚುವರಿ ಶಿಕ್ಷಕರ ಸಮಸ್ಯೆಯನ್ನು ಧೈರ್ಯ, ಚಾಣಾಕ್ಷತನದಿಂದ ನೀಗಿಸಿದರು. ಉಡುಪಿ ವಲಯಮಟ್ಟದ ವಾಲಿಬಾಲ್, ಶೆಟ್ಲ್ ಕ್ರೀಡಾಕೂಟವನ್ನು ಆಯೋಜಿಸಿದರು. 11 ವರ್ಷ ಶಾಲಾ ಮುಖ್ಯ ಶಿಕ್ಷಕರಾಗಿ ದಕ್ಷತೆಯಿಂದ ಶಾಲೆಯನ್ನು ಉಚ್ಛ್ರಾಯ ಸ್ಥಿತಿಗೆ ತಂದರು. ಸ್ವತಃ ಕೊಡುಗೈ ದಾನಿಯಾಗಿದ್ದ ಅವರು ಇತರ ದಾನಿಗಳನ್ನು ಸಂಪರ್ಕಿಸಿ ಅಗತ್ಯ ವಿದ್ಯಾರ್ಥಿಗಳಿಗೆ ಶಾಲಾ ಶುಲ್ಕ, ಪುಸ್ತಕಗಳನ್ನು, ಸಮವಸ್ತ್ರಗಳನ್ನು ಒದಗಿಸಿ ಕೊಡುತ್ತಿದ್ದರು. ನಿವೃತ್ತಿಯ ಬಳಿಕವು ಶಾಲೆ ಮತ್ತು ಹಳೆ ವಿದ್ಯಾರ್ಥಿಗಳ ನಡುವಿನ ಕೊಂಡಿಯಾಗಿ ಶಾಲಾಭಿವೃದ್ಧಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

2016ರಿಂದ ಹಿರಿಯ ಶಿಕ್ಷಕರಾಗಿದ್ದ ಶ್ರೀ ಮೋಹನ್‌ದಾಸ್ ಆರ್ ಶೆಟ್ಟಿಯವರು ಮುಖ್ಯಶಿಕ್ಷಕರಾಗಿ 3 ವರ್ಷ ಶಾಲೆಯನ್ನು ಮುನ್ನಡೆಸಿದರು. ಇವರು ಎನ್.ಸಿ.ಸಿ ದಳದ ನಿರ್ದೇಶಕರಾಗಿದ್ದು ವಿದ್ಯಾರ್ಥಿಗಳಲ್ಲಿ ರಾಷ್ಟ್ರಪ್ರೇಮ, ಶಿಸ್ತನ್ನು ಮೂಡಿಸಿದರು. ಸ್ಥಳೀಯ ಸಂಘ ಸಂಸ್ಥೆಗಳ ಮೂಲಕ ವಿವಿಧ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳ ಒಳಿತಿಗಾಗಿ ಆಯೋಜಿಸಿದರು. ನಿವೃತ್ತಿಯ ಬಳಿಕವೂ ಶಾಲಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು, ವಿದ್ಯಾರ್ಥಿಗಳಿಗೆ ಇವರ ಪಾಠ ಬೋಧನೆಯು ಈಗಲೂ ಲಭ್ಯವಾಗಿದೆ.

2019 ರಿಂದ ಶ್ರೀ ಅಶ್ವಿನ್ ರೊಡ್ರಿಗಸ್‌ರವರು ಶಾಲೆಯನ್ನು ಮುನ್ನಡೆಸುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಕ್ರೀಡಾ ಸಮವಸ್ತ್ರ, ಶಾಲಾ ವಾರ್ಷಿಕ ಸಂಚಿಕೆಗಳನ್ನು ಪರಿಚಯಿಸಲಾಯಿತು. ಸರ್ವರ ಸಹಕಾರದಲ್ಲಿ 2021 ರಲ್ಲಿ 'ಶಾಲಾ ಮಾಣಿಕ್ಯೋತ್ಸವ' ವನ್ನು ಹಲವು ಯೋಜನೆಗಳ ಮೂಲಕ ವ್ಯವಸ್ಥಿತವಾಗಿ ನಡೆಸಲಾಯಿತು. ಹಳೆ ವಿದ್ಯಾರ್ಥಿಗಳ ಸಹಕಾರದಿಂದ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೂ 'ಉಚಿತ ಕಂಪ್ಯೂಟರ್ ಶಿಕ್ಷಣ' ಇದೀಗ ಲಭ್ಯವಾಗಿದೆ.

ಪ್ರಸ್ತುತ ಶಾಲೆಯಲ್ಲಿ ಮುಖ್ಯ ಶಿಕ್ಷಕರಾದ ಶ್ರೀ ಅಶ್ವಿನ್ ರೊಡ್ರಿಗಸ್‌ರವರೊಂದಿಗೆ, ಶ್ರೀ ಐವನ್ ರೊಡ್ರಿಗಸ್, ಶ್ರೀಮತಿ ಅಸುಂಪ್ತಾ ವೀರಾ ಡಿಮೆಲ್ಲೊ, ಶ್ರೀಮತಿ ಸುನೀತಾ ಲೀನಾ ಡಿ'ಸೋಜ, ಶ್ರೀ ವಿಜಯ್ ನಾಯ್ಕ್, ಶ್ರೀಮತಿ ಶಶಿಕಲಾ, ಶ್ರೀಮತಿ ಅರ್ಚನಾ ಹಾಗೂ ಕು। ಸುಮಿತ್ರ ರವರು ವಿದ್ಯಾರ್ಥಿಗಳ ವಿದ್ಯಾರ್ಜನೆಯಲ್ಲಿ ಮಾರ್ಗದರ್ಶನ ನೀಡುತ್ತಿದ್ದಾರೆ.

2023 – 2024 ನೇ ಶೈಕ್ಷಣಿಕ ವರ್ಷದಿಂದ ವಂ. ಧರ್ಮಗುರು ಡಾ. ಪ್ರಕಾಶ್ ಅನಿಲ್ ಕಸ್ತಲಿನೊ ರವರು ಸಂಚಾಲಕರಾಗಿ ಶಾಲೆಯನ್ನು ಮುನ್ನೆಡೆಸುತ್ತಿದ್ದಾರೆ.